**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಪ್ರಾಸ –4

**OS No**: 22/2016

| | |
|---|---|
| ಹೆಸರು | ಹೆಚ್ ಎಂ ಶಿವಕುಮಾರ್ |
| ತಂದೆ/ಗಂಡನ ಹೆಸರು | **ಲೇಟ್ ಟಿ ಮಲ್ಲಿಕಾರ್ಜುನಪ್ಪ** |
| ವಯಸ್ಸು | **43 ವರ್ಷ** |
| ಉದ್ಯೋಗ | ಉಪತಹಸೀಲ್ದಾರ್, ಹಳ್ಳಿಮೈಸೂರು ಹೋಬಳಿ |
| ವಾಸಸ್ಥಳ | **ಹಳ್ಳಿಮೈಸೂರು** |

ದಿನಾಂಕಃ 02.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಆರ್ ಡಿ ಆರ್ ವಕೀಲರಿಂದಃ–**

ನಾನು ಕಳೆದ 2 ವರ್ಷಗಳಿಂದ ಹಳ್ಳಿಮೈಸೂರು ನಾಡ ಕಚೇರಿಯಲ್ಲಿ ಉಪತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಜೆ ಸ್ಲಿಪ್ ಆಧಾರದ ಮೇಲೆ ಖಾತೆ ಬದಲಾವಣೆಯನ್ನು ಯಾವ ವರ್ಷದಿಂದ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಮಾರು ವರ್ಷಗಳಿಂದ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಹಿಂದೆ ನೊಂದಾಯಿತ ಪತ್ರಗಳು ಇಲ್ಲದೇ ಇದ್ದರೂ ಸಹಾ ಖಾತೆ ಮಾಡುತ್ತಿದೆವು, ಆ ಸಮಯಕ್ಕೆ ಒಪ್ಪಿಗೆ ಪತ್ರ, ಪಾಲುಪಟ್ಟಿ ಪಹಣಿ ಮತ್ತು ಅರ್ಜಿಗಳನ್ನು ಪಡೆದುಕೊಂಡು ಖಾತೆಗಳನ್ನು ಮಾಡುತ್ತಿದ್ದೆವು.

ವಂಶವೃಕ್ಷವನ್ನೂ ಸಹಾ ಪಡೆದುಕೊಳ್ಳುತ್ತಿದ್ದೆವು. ಈ ರೀತಿಯ ಅರ್ಜಿ ಮತ್ತು ದಾಖಲಾತಿಗಳನ್ನು ನೀಡಿದಾಗ ನೀವು ಯಾವ ಕ್ರಮವನ್ನು ಅನುಸರಿಸುತ್ತಿದ್ದೀರಿ ಎಂದರೆ ಸಾಕ್ಷಿ ಅರ್ಜಿಯನ್ನು ಸ್ವೀಕರಿಸಿದ ನಂತರ ಫಾರಂ ನಂ.21 ರಲ್ಲಿ ಸಂಬಂಧಪಟ್ಟವರಿಗೆ ಹಾಗೂ ಫಾರಂ ನಂ.12 ಗ್ರಾಮಸ್ಥರಿಗೆ ನೋಟಿಸು ಜಾರಿ ಮಾಡಿ, ಒಂದು ವೇಳೆ 30 ದಿನಗಳಲ್ಲಿ ಯಾವುದೇ ತಕರಾರು ಬರದೇ ಇದ್ದಾಗ ಈ ಬಗ್ಗೆ ಮ್ಯುಟೇಶನ್ ಮಾಡಿ ಖಾತೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

ನಿಪಿ.3 ಅನ್ನು ಸಾಕ್ಷಿಗೆ ತೋರಿಸಲಾಗಿ ಈ ಅರ್ಜಿಯನ್ನು ನಮ್ಮ ಕಚೇರಿಗೆ ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದರು ಎಂದರೆ ಸಾಕ್ಷಿ ಕೆ.ವಿ. ಮಂಜುನಾಥ್ ರವರು ತಮಗೆ ವಿಭಾಗ ಪತ್ರದ ಮೂಲಕ ಕ್ಯಾತನಹಳ್ಳಿ ಗ್ರಾಮದ ಸ.ನಂ.1 ರಲ್ಲಿ 1 ಎಕರೆ ಜಮೀನು ಬಂದಿದ್ದು, ಆ ಪ್ರಕಾರ ಖಾತೆ ಮಾಡಬೇಕು ಎಂದು ಅರ್ಜಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ನಿಪಿ.3 ರಲ್ಲಿ ವಿಭಾಗ ಪತ್ರವನ್ನು ಲಗತ್ತಿಸಲಾಗಿದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ನಿಪಿ.4 ನಮ್ಮ ಕಚೇರಿಯಿಂದ ನೀಡಲಾದ ಫಾರಂ ನಂ.21(ಎ)ರ ನೊಟೀಸು ಎಂದರೆ ಸರಿ. ಹಕ್ಕು ಬದಲಾವಣೆ ಯಾರಿಂದ, ಯಾರಿಗೆ ಹಾಗೂ ಯಾವ ಆಧಾರದ ಮೇಲೆ ಎಂದು ನಿಪಿ.4 ರಲ್ಲಿ ನಮೂದಾಗಿದೆ ಎಂದರೆ ಸರಿ. ನಿಪಿ.4 ರ ಪ್ರಕಾರ ಗೌರಮ್ಮ ರವರಿಂದ ವಿಭಾಗ ಪತ್ರದ ಆಧಾರದ ಮೇಲೆ ಕೆ.ವಿ.ಮಂಜುನಾಥ್ ರವರಿಗೆ ಕ್ಯಾತನಹಳ್ಳಿ ಗ್ರಾಮದ ಸ.ನಂ.1 ರಲ್ಲಿ 1 ಎಕರೆಗೆ ಸಂಬಂಧಪಟ್ಟಂತೆ ಖಾತೆಯಾಗಿರುತ್ತದೆ. ನಿಪಿ.4 ಕ್ಕೆ ಗೌರಮ್ಮ, ಕೆ.ವಿ.ಮಂಜುನಾಥ ಹಾಗೂ ಇನ್ನೊಬ್ಬರು ಜೊತೆಗೆ 5 ಜನ ಗ್ರಾಮಸ್ಥರು ಸಹಾ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ.5 ದಾಖಲಾತಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ಕೊಟ್ಟಂತಹ ವಂಶವೃಕ್ಷದ ದೃಢೀಕೃತ ನಕಲು ಎಂದರೆ ಸರಿ. ನಿಪಿ.5 ಕ್ಕೂ ಸಹಾ ಗೌರಮ್ಮ, ಕೆ.ವಿ.ಮಂಜುನಾಥ ಹಾಗೂ ಇನ್ನೊಬ್ಬರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ. 3, 4 ಹಾಗೂ 5 ದಾಖಲಾತಿಗಳ ಆಧಾರದ ಮೇಲೆ ನಿಪಿ.6 ಮ್ಯುಟೇಶನ್ ಆಗಿದೆ ಎಂದರೆ ಸರಿ.

ನಿಪಿ.6 ಅನ್ನು ಸಾಕ್ಷಿಗೆ ತೋರಿಸಲಾಗಿ ಯಾವ ಆಧಾರದ ಮೇಲೆ ಖಾತೆಯಾಗಿದೆ ಎಂದರೆ ಸಾಕ್ಷಿ ಗೌರಮ್ಮರವರಿಂದ ಕೆ.ವಿ. ಮಂಜುನಾಥ್ ರವರು ವಿಭಾಗ ಪತ್ರದ ಮೂಲಕ ಕ್ಯಾತನಹಳ್ಳಿ ಗ್ರಾಮದ ಸ.ನಂ.1 ರಲ್ಲಿ 1 ಎಕರೆ ಜಮೀನಿನ ಖಾತೆಯಾಗಿದೆ ಎಂದು ನುಡಿಯುತ್ತಾರೆ. ನಿಪಿ.6 ಅನ್ನು ಯಾವ ರೀತಿಯಾಗಿ ಮಾಡಲಾಗಿದೆ ಎಂದರೆ ಸಾಕ್ಷಿ ಕೆ.ವಿ.ಮಂಜುನಾಥ್ ರವರು ನಮ್ಮ ಕಚೇರಿಗೆ ಸಲ್ಲಿಸಿದ ನಿಪಿ.3 ಅರ್ಜಿಯ ಮೇಲೆ ಆಗಿನ ಗ್ರಾಮ ಲೆಕ್ಕಾಧಿಕಾರಿ ಫಾರಂ ನಂ.21 ಮ್ತು ಫಾರಂ ನಂ.12 ನಲ್ಲಿ ನೋಟಿಸು ಜಾರಿ ಮಾಡಿ, 30 ದಿನಗಳಲ್ಲಿ ಯಾವುದೇ ತಕರಾರು ಬರದೇ ಇದುದ್ದರಿಂದ ಗ್ರಾಮ ಲೆಕ್ಕಾಧಿಕಾರಿಯ ವರದಿಯ ಮೇರೆಗೆ ಆಗಿನ ಹಳ್ಳಿಮೈಸೂರು ಹೋಬಳಿಯ ಉಪತಹಸೀಲ್ದಾರ್ ರವರು ಕೆ.ವಿ.ಮಂಜುನಾಥ್ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಿ ಮ್ಯುಟೇಶನ್ ಅನ್ನು ಮಂಜೂರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮ್ಯುಟೇಶನ್ ಫೀಯನ್ನೂ ಸಹಾ ಅರ್ಜಿದಾರರಿಂದ ಪಡೆದುಕೊಂಡಿರುತ್ತಾರೆ. ಎಷ್ಟು ವರ್ಷಗಳ ಕಾಲ ನಿಮ್ಮ ಕಚೇರಿಯಲ್ಲಿ ಇಂತಹ ಕಡತಗಳನ್ನು ನಿರ್ವಹಣೆ ಮಾಡುತ್ತೀರಿ ಎಂದರೆ ಸಾಕ್ಷಿ ಮ್ಯುಟೇಶನ್ ಅದ ನಂತರ ಕೇವಲ ಮ್ಯುಟೇಶನ್ ರಿಜಿಸ್ಟರ್ ಅನ್ನು ನಾಡಕಚೇರಿಯಲ್ಲಿ ಇಟ್ಟುಕೊಂಡು ಉಳಿದ ಕಡತವನ್ನು ತಾಲ್ಲೂಕು ಕಚೇರಿಯ ರೆಕಾರ್ಡ್ ರೂಮಿಗೆ ಕಳುಹಿಸಿಕೊಡುತ್ತೇವೆ ಎಂದು ನುಡಿಯುತ್ತಾರೆ. ಹಾಗಾದರೆ ತಾಲ್ಲೂಕು ಕಚೇರಿಯಲ್ಲಿ ಎಷ್ಟು ವರ್ಷಗಳ ಕಾಲ ಈ ದಾಖಲಾತಿಗಳನ್ನು ಇಟ್ಟುಕೊಳ್ಳುತ್ತೀರಿ ಎಂದರೆ ಸಾಕ್ಷಿ 'ಎ' ಕಡತಗಳನ್ನು ಶಾಶ್ವತವಾಗಿ ಇಟ್ಟುಕೊಳ್ಳುತ್ತೇವೆ, 'ಬಿ' ಕಡತಗಳನ್ನು 30 ವರ್ಷಗಳ ಕಾಲ ಇಟ್ಟುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಆರ್.ಆರ್.ಟಿ ಕಡತಗಳು ಎ, ಬಿ, ಸಿ ಅಥವಾ ಡಿ ದಲ್ಲಿ ಬರುತ್ತವೆಯಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ನಿಖರವಾದ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ.3 ರಿಂದ 6 ದಾಖಲಾತಿಗಳು ತಹಸೀಲ್ದಾರ್ ಕಚೇರಿಯಲ್ಲಿ ಲಭ್ಯವಿದ್ದು, ಅವುಗಳ ದೃಢೀಕೃತ

ನಕಲುಗಳನ್ನು ವಾದಿಯರಿಗೆ ನೀಡಿದ್ದು, ಆದರೂ ಸಹಾ ಮೂಲ ದಾಖಲಾತಿಗಳನ್ನು ನಾವು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ 1 ಮತ್ತು 2(ಎ) ರವರ ಪರವಾಗಿ ಶ್ರೀ ಕೆ.ಕೆ.ಆರ್. ವಕೀಲರಿಂದ**

ಯಾವ ದಾಖಲಾತಿಯ ಅಧಾರದ ಮೇಲೆ ಖಾತೆಯನ್ನು ವರ್ಗಾವಣೆ ಮಾಡಬೇಕು ಎನ್ನುವ ಬಗ್ಗೆ ಜೆ ಫಾರಂ ಬರುತ್ತದೆ ಎಂದರೆ ಸರಿ. ಜೆ ಫಾರಂ ಜೊತೆಗೆ ಟ್ರಾನ್ಸಾಕ್ಷನ್ ನ ವಿವರಣೆಯೂ ಸಹಾ ಬರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಮಗೆ ಯಾವುದೇ ಜೆ ಫಾರಂ ಬಂದಿರಲಿಲ್ಲ ಎಂದರೆ ಸಾಕ್ಷಿ ನೊಂದಣಿ ದಾಖಲಾತಿ ಇಲ್ಲದೇ ಇದುದ್ದರಿಂದ ಜೆ ಫಾರಂ ಬಂದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಒಂದು ಎಂ.ಆರ್. ಮಾಡುವಾಗ ಒಂದು ಕಡತವನ್ನು ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ. ಸದರಿ ಕಡತದಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿ, ವಂಶವೃಕ್ಷ, ಪಹಣಿ, ಮರಣ ಪ್ರಮಾಣ ಪತ್ರಗಳು, ಫಾರಂ ನಂ.21, ಫಾರಂ ನಂ.12 ಮತ್ತು ಅರ್ಜಿದಾರರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಇಟ್ಟಿರುತ್ತೇವೆ ಎಂದರೆ ಸರಿ. ಖಾತೆ ಮಾಡುವ ಸಮಯಕ್ಕೆ ನಾವು ಖಾತೆದಾರರ ಹೇಳಿಕೆಗಳನ್ನು ಪಡೆಯುತ್ತೇವೆ ಎಂದರೆ ಸಾಕ್ಷಿ ಪಂಚಾಯಿತಿ ಪಾಲು ಪಟ್ಟಿ ನೀಡಿದಾಗ ಫಾರಂ ನಂ.21ರ ನೋಟಿಸನ್ನು ಜಾರಿ ಮಾಡಿ ಅದಕ್ಕೆ ಅವರ ಸಹಿಗಳನ್ನು ಪಡೆಯುತ್ತೇವೆ, ಆದರೆ ಪ್ರತ್ಯೇಕ ಹೇಳಿಕೆಗಳನ್ನು ಪಡೆಯುವುದಿಲ್ಲ ಎಂದು ನುಡಿಯುತ್ತಾರೆ. ಎಂ.ಆರ್.ನಂ.1/1997-98 ಕ್ಕೆ ಸಂಬಂಧಿಸಿದಂತೆ ವಿಭಾಗ ಪತ್ರದ ಮೂಲಕ ಖಾತೆಯಾಗಿದೆ ಎಂದು ನಮೂದಿಸಿದ್ದು, ಆದರೆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಹೌದು.

ಒಂದು ವೇಳೆ ಕೇಳಿದಂತಹ ದಾಖಲಾತಿಗಳು ನಮ್ಮ ಕಚೇರಿಯಲ್ಲಿ ಲಭ್ಯವಿರದೇ ಇದ್ದಾಗ ಅವು ನಶಿಸಿಹೋಗಿವೆಯೋ, ನಾಶವಾಗಿವೆಯೋ ಅಥವಾ ಕಳೆದು ಹೋಗಿವೆಯೋ ಎಂದು ಹಿಂಬರಹವನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ಒಂದು ವೇಳೆ ದಾಖಲಾತಿಯನ್ನು ನಾವೇ ಡಿಸ್‌ಪೋಸ್ ಮಾಡಿದರೇ ಅಥವಾ ನಶಿಸಿಹೋಗಿದ್ದರೆ ಅಥವಾ ಕಳೆದು ಹೋಗಿದ್ದರೇ ಆ ಬಗ್ಗೆ ತಾಲ್ಲೂಕು ದಂಡಾಧಿಕಾರಿಗಳಿಗೆ ಮಾಹಿತಿ ಕೊಡುತ್ತೇವೆ ಎಂದರೆ ಸಾಕ್ಷಿ ಎಂ ಆರ್ ಅದ ನಂತರ ಕಡತವನ್ನು ನಾವು ಪುನಹ ತಾಲ್ಲೂಕು ಕಚೇರಿಯ ರೆಕಾರ್ಡ್ ರೂಮಿಗೆ ಕಳುಹಿಸಿಕೊಡುತ್ತೇವೆ, ಹೀಗಾಗಿ ದಾಖಲಾತಿಗಳನ್ನು ನಿರ್ವಹಣೆ ಮಾಡುವುದು ಮತ್ತು ಅವುಗಳ ಬಗ್ಗೆ ಮಾಹಿತಿ ಕೊಡುವ ಜವಬ್ದಾರಿ ತಾಲ್ಲೂಕು ಕಚೇರಿಯ ರೆಕಾರ್ಡ್ ರೂಮಿನವರಿಗೆ ಇರುತ್ತದೆ ಎಂದು ನುಡಿಯುತ್ತಾರೆ.

ಒಂದು ವೇಳೆ ಕಡತವಿದ್ದರೆ ಮಾತ್ರ ನಿಪಿ.3 ರಿಂದ 5 ದಾಖಲಾತಿಗಳ ದೃಢೀಕೃತ ದಾಖಲಾತಿಗಳನು ಕೊಡಲು ಸಾಧ್ಯವಿದೆ ಎಂದರೆ ಸರಿ. ಎಂ.ಆರ್.1/1997-98 ಆಗುವ ಸಮಯಕ್ಕೆ ಯಾವುದೇ ವಿಭಾಗ ಪತ್ರ ಇರಲಿಲ್ಲ, ಒಂದು ವೇಳೆ ಇದ್ದರೆ ಅದನ್ನು ದಾಖಲಾತಿಗಳ ಜೊತೆಗೆ ಹಾಜರುಪಡಿಸುತ್ತಿದ್ದೆವು ಎಂದರೆ ಸರಿಯಲ್ಲ. ಯಾವುದೇ ದಾಖಲಾತಿಗಳು ಇಲ್ಲದೇ ಇದ್ದರೂ ಸಹಾ ನಮ್ಮ ಕಚೇರಿಯಿಂದ ಕೆ ವಿ ಮಂಜುನಾಥ್ ರವರಿಗೆ ಎಂ.ಆರ್.1/1997-98 ಖಾತೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 10ನೇ ಪ್ರತಿವಾದಿ ಪರ ಶ್ರೀ ಎ.ಎಸ್. ವಕೀಲರಿಂದ**

ನಾನು ದಿಃ19.06.2023ರಿಂದ ಹಳ್ಳಿಮೈಸೂರು ಹೋಬಳಿ ನಾಡಕಚೇರಿಯಲ್ಲಿ ಉಪತಹಸೀಲ್ದಾರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 30.06.2025 ರಂದು ನನಗೆ ಈ

ಪ್ರಕರಣಕ್ಕೆ ಸಂಬಂಧಪಟ್ಟಂತೆ ನೋಟಿಸು ಬಂದಿರುತ್ತದೆ. ಯಾವ ಆಸ್ತಿಗೆ ಸಂಬಂಧಪಟ್ಟಂತೆ ಸಾಕ್ಷಿ ನುಡಿಯ ಬೇಕು ಎನ್ನುವ ಮಾಹಿತಿ ನನಗೆ ಇಲ್ಲ ಎಂದರೆ ಸಾಕ್ಷಿ ನಾನು ನಮ್ಮ ಗ್ರಾಮಲೆಕ್ಕಾಧಿಕಾರಿಯೊಂದಿಗೆ ವಿಚಾರಣೆ ಮಾಡಿ ಈ ಪ್ರಕರಣದಲ್ಲಿ ಹಕ್ಕು ಬದಲಾವಣೆಗೆ ಸಂಬಧಪಟ್ಟಂತೆ ಸಾಕ್ಷಿ ನುಡಿಯಬೇಕು ಎಂದು ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಗ್ರಾಮಲೆಕ್ಕಾಧಿಕಾರಿ ನನಗೆ ಹೇಳಿದ ಮಾಹಿತಿಯ ಮೇರೆಗೆ ನಾನು ಈ ದಿನ ಸಾಕ್ಷಿ ಹೇಳುತ್ತಿದ್ದೇನೆ. ಗ್ರಾಮಲೆಕ್ಕಾದಿಕಾರಿ ಹೇಳಿದ ನಂತರ ನಾನು ನಮ್ಮ ಕಚೇರಿಯಲ್ಲಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಎಂ.ಆರ್.1/1997-98 ಕ್ಕೆ ಸಂಬಂಧಿಸಿದ ಮ್ಯುಟೇಶನ್ ಒಂದನ್ನು ಮಾತ್ರ ನಾನು ಪರಿಶೀಲನೆ ಮಾಡಿರುತ್ತೇನೆ. ಸಮನ್ಸ್ ಬಂದ ನಂತರ ಎಂ.ಆರ್.1/1997-98 ಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ತಾಲ್ಲೂಕು ಕಚೇರಿಗೆ ಹೋಗಿ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ಫಾರಂ ನಂ.21 ಮತ್ತು 12 ಜಾರಿ ಮಾಡಿದ್ದೇವೆ ಎಂದು ಯಾವ ಅಧಾರದ ಮೇಲೆ ಹೇಳುತ್ತೀರಿ ಎಂದರೆ ಸಾಕ್ಷಿ ಎಂ ಆರ್ ನಲ್ಲಿ ಆ ಬಗ್ಗೆ ಉಲ್ಲೇಖವಿದೆ, ಅದನ್ನು ನೋಡಿ ಹೇಳಿದ್ದೆ ಎಂದು ನುಡಿಯುತ್ತಾರೆ.

ಕಚೇರಿಯ ಕೈಪಿಡಿಯಲ್ಲಿ ಎ, ಬಿ, ಸಿ ಮತ್ತು ಡಿ ಕಡತಗಳ ಬಗ್ಗೆ ಉಲ್ಲೇಖವಿದೆ. ಎಲ್ಲಾ ಕಡತಗಳನ್ನು ನೋಡಿಕೊಳ್ಳುವುದು, ಡಿಸ್ಟ್ರೆಕ್ಷನ್ ಮಾಡುವುದು, ಡೆಸ್ಟ್ರಾಯ್ ಮಾಡುವುದು ಹಾಗೂ ಅವುಗಳು ಕಳೆದು ಹೋಗದಂತೆ ನೋಡಿಕೊಳ್ಳುವ ಜವಬ್ದಾರಿ ಆಯಾ ತಾಲ್ಲೂಕಿನ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇರುತ್ತದೆ ಎಂದರೆ ಸರಿ. ಹಕ್ಕು ಕೊಡುವಂತಹ ದಾಖಲಾತಿಯನ್ನು ಹಾಜರುಮಾಡಿದರೆ ಅದನ್ನು ಡೆಸ್ಟ್ರಾಯ್ ಮಾಡಲು ಅವಕಾಶ ಇಲ್ಲ ಎಂದರೆ ಸಾಕ್ಷಿ ಅವಧಿ ಮುಗಿದ

ನಂತರ ಡೆಸ್ಟ್ರಾಯ್ ಮಾಡುತ್ತಾರೆ ಎಂದು ನುಡಿಯುತ್ತಾರೆ. ಡೆಸ್ಟ್ರಾಯ್ ಅಂಡ್ ಡಿಸ್ಟ್ರೆಕ್ಷನ್ ಆಫ್ ಲ್ಯಾಂಡ್ ರೆಕಾರ್ಡ್ ಗಳ ಬಗ್ಗೆ ಒಂದು ಕಾಯ್ದೆ ಇದೆ ಎಂದರೆ ಸಾಕ್ಷಿ ಕಚೇರಿಯ ಕೈಪಿಡಿಯಲ್ಲಿದೆ ಎಂದು ನುಡಿಯುತ್ತಾರೆ. ಒಂದು ವೇಳೆ ಹಕ್ಕು ಕೊಡುವ ದಾಖಲಾತಿಗಳನ್ನು ಡೆಸ್ಟ್ರಾಯ್ ಅಥವಾ ಡಿಸ್ಟ್ರೆಕ್ಷನ್ ಮಾಡಿದರೆ ಕ್ರಿಮಿನಲ್ ಪ್ರಕರಣವಾಗುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಕ್ಕು ಕೊಡುವ ದಾಖಲಾತಿಯಾದ ವಿಭಾಗ ಪತ್ರವನ್ನು ನಾನು ಪರಿಶೀಲನೆ ಮಾಡಲು ಪ್ರಯತ್ನ ಮಾಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇದೇ ಇದ್ದರೂ ಸಹಾ ಗ್ರಾಮ ಲೆಕ್ಕಾಧಿಕಾರಿ ಹೇಳಿಕೊಟ್ಟಂತೆ ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.